10

# ದೋಯೇಗ

## ವಿಶ್ವಾಸಘಾತಕ ಕಾರ್ಯಕ್ಕೆ ಪ್ರತಿಫಲ (21:1-22:22)

ಸಮುದ್ರದಂಡೆಯ ನಕ್ಷೆಗಳಲ್ಲಿ ನೀರಿನ ಅಡಿಯಲ್ಲಿ ಮೋಸಕರವಾಗಿರುವ ಬಂಡೆಯ ಸಾಲುಗಳ ಪ್ರದೇಶಗಳನ್ನು ಗುರುತಿಸಿರುತ್ತಾರೆ. ಅಪಾಯಕಾರಿಯಾಗಿರುವ ಈ ಬಂಡೆಯ ಸಾಲುಗಳು ಮುಗ್ಧತೆಯ ಚಿತ್ರವನ್ನು ಪ್ರಕಟಿಸುತ್ತವೆ. ಯಾವ ಸಂಶಯವಿಲ್ಲದೇ ಸಾಗುತ್ತಿರುವ ನಾವೀಕರಿಗೆ ಈ ಅಪಾಯದ ಕುರಿತು ಎಚ್ಚರಿಸಲು ಅನೇಕ ಲಘುಪ್ರಕಟಣೆಗಳು ಕೊಡಲ್ಪಟ್ಟಿವೆ. ಈ ಬಂಡೆಯ ಸಾಲುಗಳು ಒಬ್ಬ "ವಿಶ್ವಾಸಘಾತಕ ವ್ಯಕ್ತಿಯಂತೆ" ಇರುತ್ತವೆ, ಮುಗ್ಧತೆಯ ಚಿತ್ರವನ್ನು ಪ್ರಕಟಿಸುತ್ತಿದ್ದರೂ ನೈಜವಾಗಿ ವಿಷ ಮತ್ತು ಮರಣದಿಂದ ತುಂಬಿರುತ್ತಾರೆ.

1 ಸಮುವೇಲನಲ್ಲಿ, ಎದೋಮ್ಯನಾದ ದೋಯೇಗನು ಅಂಥ ವಿಶ್ವಾಸಘಾತ ಕತನವನ್ನು ಸೂಚಿಸುತ್ತಾನೆ ಮತ್ತು ಅವನಂತೆ ಜೀವಿಸುವ ಪ್ರತಿಯೊಬ್ಬರಿಗೂ ಎಚ್ಚರಿಸುತ್ತಾನೆ.

ದೋಯೇಗನು ಎದೋಮ್ಯನೆಂದು ವಿವರಿಸಲ್ಪಟ್ಟಿದ್ದಾನೆ. ಅವನು ಇಸ್ರಾಯೇಲ್ಯರವನಲ್ಲ ಆದರೆ ಒಬ್ಬ ಪರದೇಶಸ್ಥನು, ಏಸಾವನ ಸಂತತಿಯವನು. ದೋಯೇಗನ ವಂಶಕ್ಕೂ ಇಸ್ರಾಯೇಲ್ಯರಿಗೂ ವೈಶಮ್ಯವಿತ್ತು. ವಿದ್ಯಾಭ್ಯಾಸ ಮತ್ತು ರೂಢಿಯಿಂದಲೂ ಅವನು ಆಳವಾದ ಕಳಕಳಿಯನ್ನು ಮುಂಬರುವ ಮೆಸ್ಸೀಯನ ಕುರಿತು ಹಂಚಿಕೊಳ್ಳಲು ಸಾಧ್ಯವಿರಲಿಲ್ಲ. ಆದರೆ ದೋಯೇಗನು ಇಸ್ರಾಯೇಲ್ಯರ ನಂಬಿಕೆಗೆ ಮತಾಂತರ ಹೊಂದಿದನು, ಯಾಕೆಂದರೆ ಅವನು ನೋಬಿನಲ್ಲಿ ಒಂದು ಧಾರ್ಮಿಕ ವಿಧಿಯನ್ನು ಗಮನಿಸುವದಕ್ಕೆ ಬಂದಿದ್ದನು (21:7). ಸೌಲ ಆಸ್ಥಾನದಲ್ಲಿ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದನು. ಪಶುಪಾಲರಲ್ಲಿ ಪ್ರಧಾನನು ಎಂಬ ಬಿರುದು ಅವನಿಗಿತ್ತು.

### ಅವನ ವಿಸ್ವಾಸಘಾತಕ ಕಾರ್ಯಗಳು

1 ಸಮುವೇಲ ಓದುವವರಿಗೆ ದೋಯೇಗನ ಮೋಸಕರವಾದ ಗುಣ ಸ್ಪಷ್ಟವಾಗಿ ತಿಳಿದುಬರುತ್ತದೆ. ದಾವೀದನು ತನ್ನ ಜೀವಕ್ಕಾಗಿ ಓಡಿಹೋಗುತ್ತಿದ್ದನು. ಆಗ ಅವನು ನೋಬ ದಲ್ಲಿದ್ದ ಆಲಯಕ್ಕೆ ಹೋದನು. ಶಿಲೋವಿನ ನಾಶನದ ತರುವಾಯ ಸೌಲನು, ಗುಡಾರ ಮತ್ತು ಅಲ್ಲಿನ ಸೇವೆಯನ್ನು ನೋಬಕ್ಕೆ ಸ್ಥಳಾಂತರಿಸಿದ್ದನು. ದಾವೀದನು ಬಹು ಕುಗ್ಗಿದವನಾಗಿದ್ದನು. ದೇವರಲ್ಲಿನ ಅವನ ನಂಬಿಕೆ ಕುಗ್ಗಿತ್ತು ಮತ್ತು ಅವನು ತನ್ನ ಬಲದ ಮೇಲೆ ಅವಲಂಬಿಸಿದನು. ಮಹಾಯಾಜಕನಿಗೆ ಸುಳ್ಳು ಹೇಳಿ ಗೋಲ್ಯಾತನ ಕತ್ತಿಯನ್ನು ಮತ್ತು ಮೀಸಲ ರೊಟ್ಟಿಯನ್ನು ಪಡೆದನು.

ದೋಯೇಗನನ್ನು ಅಲ್ಲಿ ನೋಡಿದ ದಾವೀದನು ತ್ವರಿತವಾಗಿ ನೋಬಕ್ಕೆ ಹೋದನು. ತನ್ನ ಧಾರ್ಮಿಕ ಕಾರ್ಯಗಳನ್ನು ತೀರಿಸಿದ ದೋಯೇಗನು ಸೌಲನ ಬಳಿಗೆ ನೇರವಾಗಿ ಹೋಗಿ ಅಲ್ಲಿ ನಡೆದ ಘಟನೆಯನ್ನು ವಿವರಿಸಿದನು. ಕೆಲವರು ಸೂಚಿಸುವಂತೆ ದೋಯೇಗನ ಸುದ್ದಿಯು ಮೊದಲು ಏಕಾಂತದಲ್ಲಿ ನಂತರ 22:6ff. ನಲ್ಲಿಯ ಸಾರ್ವಜನಿಕ ಕೂಟದಲ್ಲಿ ಹೇಳಲ್ಪಟ್ಟಿತು. ದೋಯೇಗನು ಸತ್ಯವನ್ನು ಹೇಳಿ ದರೂ, ಅದು ಇನ್ನೊಂದು ಚಿತ್ರ ಕೊಡುವಂತೆ ತನ್ನ ಮಾತುಗಳನ್ನು ರೂಪಿಸಿದನು (22:9, 10). ಅವನ ಮಾತುಗಳು

ಸೌಲನ ಕೋಪ ಮುಗ್ಧ ಯಾಜಕರನ್ನು ದಂಡಿಸುವಂತೆ ಮಾಡಿದ್ದಲ್ಲದೇ, ಯಾಜಕರ ಸಮೂಹವನ್ನು ಸಂಪೂರ್ಣವಾಗಿ ಹತ್ಯೆ ಮಾಡುವಂತೆ ನಡೆಸಿತು. ಅರಸನ ಆಳುಗಳು ಈ ಭಯಂಕರ ಮತ್ತು ಕ್ರೂರವಾದ ಕಾರ್ಯವನ್ನು ಮಾಡುವುದಕ್ಕೆ ನಿರಾಕರಿಸಿದಾಗ, ಸೌಲನು ದೋಯೇಗನಿಗೆ, "ನೀನು ಹೋಗಿ ಅವರನ್ನು ಕೊಲ್ಲು" ಎಂದು ಹೇಳಿದನು. ಅವನು ಮಾಡಿದನು. ದೋಯೇಗನು ಅದನ್ನು ಯೋಜಿಸಿದನು, ಸೌಲನು ಅದನ್ನು ಸಾಧಿಸುವಂತೆ ದುರುಪಯೋಗ ಪಡಿಸಿದನು, ದ್ವೇಷದ ನಿಮಿತ್ತ ಮುಗ್ಧ ಜನರನ್ನು ಹತ್ಯೆ ಮಾಡಿದನು ಮತ್ತು ತನ್ನ "ವೀರತನವನ್ನು" ಹೊಗಳಿಕೊಳ್ಳುವದಕ್ಕೆ ಹಿಂತೆಗೆಯಲಿಲ್ಲ! ಇವನಿಗಿಂತ ಮೋಸಕರ ವಾದ ವ್ಯಕ್ತಿ ಸಂಪೂರ್ಣ ಬೈಬಲಿನಲ್ಲಿ ನಾವು ಕಾಣುತ್ತೇ ವೆಯೋ? ತಪ್ಪಿಸಿಕೊಂಡು ಬಂದ ಒಬ್ಬ ವ್ಯಕ್ತಿಯಿಂದ ಸುದ್ದಿಯು ದಾವೀದನನ್ನು ಮುಟ್ಟಿದಾಗ ಕೀರ್ತನೆ 52 ಬರೆ ಯಲ್ಪಟ್ಟಿತು.

## ಅವನ ವಿಶ್ವಾಸಘಾತಕ ಸ್ವಭಾವದ ಗುಣಲಕ್ಷಣಗಳು

ದೋಯೇಗನ ಸ್ವಭಾವದಲ್ಲಿ ಗುಣಗಳು ಹಾಸು ಹೊಕ್ಕಾಗಿದ್ದವು. ಇವುಗಳನ್ನು ಲಕ್ಷ್ಯವಿಟ್ಟು ಗಮನಿಸೋಣ ಯಾಕೆಂದರೆ ದೋಯೇಗನಂತೆ ನಾವೂ ಇವುಗಳನ್ನು ಪೋಷಿಸಬಹುದು!

*ಅವನು ತನ್ನ ನಾಲಿಗೆಯನ್ನು ಬೇಜವಾಬ್ದಾರಿಯಿಂದ ಉಪಯೋಗಿಸಿನು* (22:9, 10; ಕೀರ್ತನೆ 52:2, 4). ಮಹಾಯಾಜಕನು ದಾವೀದನನ್ನು ಪ್ರಶ್ನಿಸಿದನೆಂದು ದೋಯೇಗನು ಹೇಳಲಿಲ್ಲ. ತನ್ನ ಗುರಿಗೆ ಹೊಂದುವಂತೆ ದೋಯೇಗನು ತನ್ನ ಮಾತುಗಳನ್ನು ರೂಪಿಸಿದನು ಮತ್ತು ಅವನ ಗುರಿಯು ಮಹಾಯಾಜಕನನ್ನು ಅತಿ ಕೆಟ್ಟದಾಗಿ ಕಾಣುವಂತೆ ಮಾಡುವದು! ಕೀರ್ತನೆ 52:2ರಲ್ಲಿ ಬರೆದಂತೆ ಅವನು ಮೋಸವನ್ನು ಕಲ್ಪಿಸುತ್ತಿದ್ದನು. ಅವನು ಪ್ರತಿಯೊಂದು ಮಾತನ್ನು ಯೋಜಿಸಿದನು ಮತ್ತು ಕಾರ್ಯಸಾಧಿಸಿದನು (22:4). ತನ್ನ ನಾಲಿಗೆಯನ್ನು ಯಾಜಕರನ್ನು ನಾಶಮಾಡುವದಕ್ಕೆ ಉಪಯೋಗಿಸಿದನು. ನುಂಗುವ ಮಾತುಗಳು ನಾಶಮಾಡುವ ಮಾತುಗಳಾಗಿವೆ ಮತ್ತು ಇತರರ ಜೀವನವನ್ನು ನಾಶಗೊಳಿಸುತ್ತವೆ.

ಬೇಜವಾಬ್ದಾರಿಯ ನಾಲಿಗೆಯು ಮೋಸಕರವಾದ ವ್ಯಕ್ತಿಯನ್ನು ಗುರಿತಿಸುತ್ತದೆ! ಯಾಕೋಬ 3:6 ಹೇಳುವಂತೆ, "ನಾಲಿಗೆಯೂ ಕಿಚ್ಚೇ. ನಾಲಿಗೆಯು ಅಧರ್ಮಲೋ ಕರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟಿದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿಹಚ್ಚುತ್ತದೆ." ಪಾಪದ ಶೋಧನೆಯನ್ನು ಹಿಂಬಾಲಿಸಿ ಇತರರನ್ನು ನಾಶಮಾಡುವ ಮಾತುಗಳನ್ನು ನುಡಿಯುವದು ಎಷ್ಟು ಸರಳ. ದೋಯೇಗನು ಹರಟೆ ಮಾತುಗಳನ್ನಾಡಿದನು ಮತ್ತು ದೇವಜನರನ್ನು ನಾಶಗೊಳಿಸಿದನು. ನಮ್ಮ ಹತಾಶೆಯ ಪರಿಸ್ಥಿತಿಯಲ್ಲಿ, ಲಿಂಕನ್ ಅವರು ತಮ್ಮ ಸೇನಾಪತಿಗಳ ಸಭೆಯನ್ನು ಕರೆದರು. ಅವರಲ್ಲಿ ಒಬ್ಬರು ಬಹಳ ಮಾತುಗಾರರು, ಸುಮ್ಮನಿರುತ್ತಿರಲಿಲ್ಲ. ಈ ಮಾತುಗಾರ ಸೇನಾಪತಿಗೆ ಕಪ್ಪಾದ ಕೂದಲು ಮತ್ತು ಬಿಳಿ ಗಡ್ಡವಿತ್ತು. ಲಿಂಕನ್‌ರ ಪಕ್ಕದಲ್ಲಿ ಕೂತಿದ್ದ ಒಬ್ಬ ಸೇನಾಪತಿಯು, ಇವರಿಗೆ ಯಾಕೆ ಕಪ್ಪು ಕೂದಲು ಬಿಳಿಗಡ್ಡವಿದೆ ಎಂದು ಪ್ರಶ್ನಿಸಿದರು. "ಯಾಕೆಂದರೆ ಅವರು ತಮ್ಮ ತಲೆಗಿಂತಲೂ ತಮ್ಮ ದವಡೆಯನ್ನು ಬಹಳವಾಗಿ ಉಪಯೋಗಿಸುತ್ತಾರೆ!" ಎಂದು ಲಿಂಕನ್ ನುಡಿದರು. ಬೇಜವಾ ಬ್ದಾರಿಯ ಮಾತುಗಳಲ್ಲಿ ಭಾಗವಹಿಸುವವರ ಕುರಿತು ಇದು ಸತ್ಯವಾಗಿದೆ!

*ಅವನು "ಸ್ವಂತ"ದಿಂದ ನಿಯಂತ್ರಿಸಲ್ಪಟ್ಟಿದ್ದನು.* ದೋಯೇಗನು "ಇದರಲ್ಲಿ ನನಗೇನಿದೆ?" ಎಂದು ಪ್ರಶ್ನಿಸಿದನು. ತನ್ನನ್ನು ಭೂಮಂಡಲದ ಕೇಂದ್ರಬಿಂದು ವಾಗಿ ಮಾಡಿಕೊಂಡನು. ಸೌಲನು ಹುಚ್ಚನಾಗಿ ತನ್ನ ಸುತ್ತಲಿದ್ದವರೆನ್ನೆಲ್ಲ ಪ್ರಶ್ನಿಸಿದನು (22:8). ದೋಯೇಗನು ಈ ಸಂದರ್ಭವನ್ನು ಉಪಯೋಗಿಸಿದನು.

ಎಲ್ಲಾ ಸೋಲಕ್ಕೆ ಇಲ್ಲಿದೆ ಬುನಾದಿ. ನಮ್ಮ ಸ್ವಾರ್ಥವನ್ನು ಪೋಷಿಸುವಾಗ, ದೇವರನ್ನು

ಮರೆಮಾಡುತ್ತೇವೆ. ಸ್ವಾರ್ಥವು ದೋಯೇಗನನ್ನು ದುರಾಶೆಗೆ ತಳ್ಳಿತು. ಸೌಲನಿಂದ ದಯೆಯನ್ನು ಹೊಂದಲು, ಅವನು ಏನನ್ನೂ ಮಾಡಲೂ ಸಿದ್ಧನಿದ್ದನು! ಕೀರ್ತನೆ 52:7ಎ ಸ್ವಾರ್ಥವು ಅವನನ್ನು ಅಧಿಕ ಪ್ರಾಪಂಚಿಕ ಜೀವನಕ್ಕೆ ನಡೆಸಿತು ಎಂದು ಪ್ರಕಟಿಸುತ್ತದೆ (ರೋಮಾಪುರ 1:28).

ದೋಯೇಗನನಂತೆ ಸ್ವಾರ್ಥದಿಂದ ನಿಯಂತ್ರಿಸಲ್ಪಟ್ಟಿರುವ ಅನೇಕರು ಇಂದಿನ ದಿನಗಳಲ್ಲಿರುವದು ದುಃಖಕರವಾಗಿದೆ. ತಾವು ಮೋಸಕ್ಕೆ ನಡೆಸಲ್ಪಡುತ್ತಿದ್ದೇವೆಂಬ ಸತ್ಯಕ್ಕೆ ಅವರು ಕುರುಡರಾಗಿದ್ದಾರೆ (1 ಯೋಹಾನ 2:15; ಫಿಲಿಪ್ಪಿ 2:4; ಕೀರ್ತನೆ 52:7ಬಿ).

*ಅವನೊಬ್ಬ ಹೇಡಿಯಾಗಿದ್ದನು.* "ದೋಯೇಗ" ಎಂಬ ಹೆಸರಿನ ಅರ್ಥ ಹೆದರುವವ ಅಥವಾ ಭಯಪಡುವವ ಕಾರ್ಯವು ತೀರದ ನಂತರ ದೋಯೇಗನು ತನ್ನ ದುಷ್ಟ ಕೆಲಸದ ಹೊಗಳಿಕೊಂಡನು: ಕೀರ್ತನೆ 52:1, "ದುಷ್ಟಾಧಿಕಾರಿಯೇ, ನೀನು ಕೆಡಕುಮಾಡಿ ಹಿಗ್ಗುವದೇನು? ದೇವರ ಕೃಪೆಯು ಯಾವಾಗಲೂ ಇರುವದು." ಎಷ್ಟು ಅಸಹ್ಯಕರವಾಗಿದೆ! ತಾನು ಮನ್ನಣೆ ಪಡೆದು ಎಲ್ಲರೂ ಗಮನಿಸುವಂತೆ ಎತ್ತರ ಸ್ಥಳದಲ್ಲಿರಿಸಿಕೊಂಡನು. ಇದು ಒಬ್ಬ ಮೋಸಕರವಾದ ವ್ಯಕ್ತಿಯ ಸ್ಪಷ್ಟ ಚಿತ್ರವಾಗಿದೆ - ಹೆಮ್ಮೆ ಮತ್ತು ಅಗೌರವದಿಂದ ನಡಕೊಳ್ಳುವದು. "ಸ್ವ" ತನ್ನನ್ನೇ ಹೊಗಳಿಕೊಳ್ಳುವದಕ್ಕೆ ಇಷ್ಟಪಡುತ್ತದೆ. ದೋಯೇಗನು ಇದಕ್ಕೆ ಬಹು ಸುಂದರವಾದ ಉದಾಹರಣೆಯಾಗಿದ್ದಾನೆ (ರೋಮಾಪುರ 11:25; 12:16).

*ಅವನು ದ್ವೇಷದಿಂದ ತುಂಬಿದ್ದನು.* ಅವನಲ್ಲಿ ಕರುಣೆಯಾಗಲೀ ಇರಲಿಲ್ಲ. ಹಸುಕೂಸುಗಳ ಗೌರವವಿಲ್ಲದಿರುವದನ್ನು ಅರ್ಥಮಾಡಿಕೊಳ್ಳುವಾಗ, ದೋಯೇಗನ ಕ್ರೌರ್ಯ ಆಶ್ಚರ್ಯಚಕಿತಗೊಳಿಸುತ್ತದೆ. ಅವನು ಬಹು ದ್ವೇಷದಿಂದ ತುಂಬಿದ್ದರಿಂದಲೇ, ಸೌಲನನ್ನು ಯಾಜಕರ ಮುಗ್ದತೆಯ ವಿಷಯದಲ್ಲಿ ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸಿದನು.

ತನ್ನನ್ನೇ ಹೊರತು ವಿಶ್ವಾಸಘಾತಕತನವು ಮುಗ್ದತೆಯನ್ನು ಗೌರವಿಸುವದಿಲ್ಲ. ವಿಶ್ವಾಸಘಾತಕತನ ಪ್ರಾಮುಖ್ಯ ಗುರಿಯು ಸ್ವಂತಕ್ಕಾಗಿ ಲಾಭಗಳಿಸುವದು. ಇದನ್ನು ತಡೆಯುವುದಾದರೆ, ದ್ವೇಷವು ನಾಶಗೊಳಿಸುವದಕ್ಕೆ ಮಾರ್ಗ ಹುಡುಕುತ್ತದೆ!

*ಅವನು ದೇವರಲ್ಲಿ ಭರವಸೆವಿಡಲಿಲ್ಲ.* ನಂಬಿಕೆಯಿಲ್ಲದಿರುವದು, ಅವನ ಆರಾಧನೆಯ ಭಾವನೆಯಲ್ಲಿ ತಿಳಿದುಬರುತ್ತದೆ. ಆಲಯದಲ್ಲಿದ್ದರೂ ಅವನು ದೇವರಿಂದ ಬಹು ದೂರವಾಗಿದ್ದನು (ಕೀರ್ತನೆ 52:7ಎ). ಅವನು ಅದರ ಆಚಾರಗಳಲ್ಲಿ ಪಾಲುಗೊಂಡನು ಆದರೆ ಅದರ ಆತ್ಮವನ್ನು ತಪ್ಪಿಸಿಕೊಂಡನು. ಇಂದೂ ಕೂಡ ಇದು ನಡೆಯುತ್ತದೆ (1 ತಿಮೊಥೆ 2:8ಬಿ).

ಮೋಸಕರವಾದ ವ್ಯಕ್ತಿಯು ದೇವರ ಮೇಲೆ ಆತುಕೊಳ್ಳುವದಿಲ್ಲ. ದ್ವೇಷದಿಂದ ತುಂಬಿದ ಮತ್ತು ಸೂಕ್ಷ್ಮಗ್ರಾಹಿಯಲ್ಲದ ವ್ಯಕ್ತಿ, ದೇವರು ತನ್ನ ಮೇಲೆ ಆತುಕೊಂಡಿದ್ದಾನೆಂದು ಗ್ರಹಿಸುತ್ತಾನೆ. ಮೋಸಕರವಾದ ವ್ಯಕ್ತಿಯು, ತನ್ನದೇ ಮಟ್ಟವನ್ನು ಇಟ್ಟುಕೊಳ್ಳುತ್ತಾನೆ ಮತ್ತು ಅದನ್ನು ನಿಯಮವೆಂದು ಗೌರವಿಸುತ್ತಾನೆ. ಮೋಸಕರವಾದ ವ್ಯಕ್ತಿಯು ಪ್ರೀತಿ ಯ ಕುರಿತು ಇರುವ ದೇವರ ಆಜ್ಞೆಗೆ ಕಿವುಡನಾಗಿದ್ದೇನೆ. ಮೋಸಕರವಾದ ವ್ಯಕ್ತಿ ಕೀರ್ತನೆ 52:3ರಲ್ಲಿ ನೋಡುವಾಗ ಎರಡು ವಿಷಯಗ ಳಲ್ಲಿ ಆನಂದಿಸುತ್ತಾನೆ: (1) ದೇವರ ಒಳ್ಳೇತನವು ತಿರಸ್ಕರಿಸಲ್ಪಟ್ಟು, ನೈತಿಕ ನಿಯಮವನ್ನು ಅಲಕ್ಷಿಸಿದಾಗ, (2) ದೇವರ ನೀತಿಯನ್ನು ತೊರೆದು ಬಿಟ್ಟು ಒಡಂಬಡಿಕೆಯ ನಿಯಮವನ್ನು ಮುರಿದುಬಿಟ್ಟಾಗ.

## ವಿಶ್ವಾಸಘಾತಕತನದ ಗಂಭೀರ ಪ್ರತಿಫಲ

ಎಲ್ಲಾ ಮೋಸಕ್ಕೆ ಉತ್ತರ ದೊರೆಯುತ್ತದೆ ಎಂದು ದೋಯೇಗನ ಜೀವನ ಕತೆಯು ತಿಳಿಸುತ್ತದೆ (ಹೋಶೇಯ 10:13ಎ).

*ಅದಕ್ಕೆ ಪ್ರತಿಪಲ ದೊರೆಯಿತು* ಇನ್ನೂ ಆಳವಾಗಿ ಪಾಪಕ್ಕೆ ಇಳಿದು ಹೋಗುವ (ಕೀರ್ತನೆ 52:3). ಪಾಪದ ವಿಷಯದಲ್ಲಿ, ಮೋಸಕರವಾದ ವ್ಯಕ್ತಿ ತಪ್ಪಿಸಿಕೊಳ್ಳಲಾರದ ಒಂದು ರೀತಿಯ "ಚಟ" ಕಾಣಿಸಿಕೊಳ್ಳುತ್ತದೆ. 2 ಪೇತ್ರ 2:14 ಹೀಗೆ ಹೇಳುತ್ತದೆ, "ಇವರು ಜಾರತ್ವದಿಂದ ತುಂಬಿದ ಮತ್ತು ಪಾಪವನ್ನು ಬಿಡಲೊಲ್ಲದ ಕಣ್ಣುಳ್ಳವರೂ ಚಪಲಚಿತ್ತರನ್ನು ಮರುಳುಗೊಳಿಸುವವರೂ ಲೋಭದಲ್ಲಿ ತೇರ್ಗಡೆ ಹೊಂದಿದ ಮನಸ್ಸುಳ್ಳವರೂ ಶಾಪಕ್ಕೆ ಪಾತ್ರರೂ ಆಗಿದ್ದಾರೆ." ಸ್ವಲ್ಪ ಸಮಯದಲ್ಲಿಯೇ ಒಬ್ಬನು ತನ್ನನ್ನು ಹೆಚ್ಚಿನ ಹರಟೆ ಮಾತು ದ್ವೇಷ, ಇತ್ಯಾದಿಗಳಲ್ಲಿ ಭಾಗಿಯಾಗುವದನ್ನು ಕಾಣುತ್ತಾನೆ (ಕೀರ್ತನೆ 52:3). ದೇವರನ್ನು ತಿರಸ್ಕರಿಸಿ, ಮೋಸಕರವಾದ ವ್ಯಕ್ತಿಯು ಕೇವಲ ಅಪರಾಧಿಯಾಗುತ್ತಾನೆ (ರೋಮಪುರ 1:21-24). ಎಂಥ ದುರದೃಷ್ಟಕರವಾದ ಪ್ರತಿಫಲ!

*ಅದು ನಾಶನದ ಪ್ರತಿಫಲವನ್ನು* ಹೊಂದುತ್ತದೆ (ಕೀರ್ತನೆ 52:5). ದೇವರ ನ್ಯಾಯತೀರ್ಪು ಪ್ರಗತಿಪರವಾಗಿ ವಿವರಿಸಲ್ಪಟ್ಟಿದೆ. ಮೊದಲಿಗೆ ಅದರಲ್ಲಿ "ಸೋಲು," ನಂತರ "ಹೊರಡಿಸುವದು," ಅಂತ್ಯದಲ್ಲಿ "ನಿರ್ನಾಮ," ರಭಸದ, ತಕ್ಷಣದ ಮತ್ತು ಖಚಿತವಾದ ಬದಲಾವಣೆ ಇರದಿದ್ದರೆ, ಭಯಂಕರ ಅಂತ್ಯ ಬರುವದೆಂದು ದೇವರು ನಮ್ಮನ್ನು ಎಚ್ಚರಿಸುತ್ತಾನೆ (ಲೂಕ 13:3).

*ಅದು ಏಕಾಂಗಿತನದ ಪ್ರತಿಫಲವನ್ನು* ಹೊಂದುತ್ತದೆ (22:22). ಒಬ್ಬನ ಗುಣವು ಬಯಲಾಗುತ್ತದೆ. ಮತ್ತು ಒಂದು ಕಾಲದಲ್ಲಿ ಅತಿ ಪ್ರಾಮುಖ್ಯವೆಂದು ತಿಳಿದಿದ್ದ ಗೌರವವು ಕುಂದಿ ಹೋಗುತ್ತದೆ. ದಾವೀದನಿಗೆ ದೋಯೇಗನು ಯಾವ ತರದ ವ್ಯಕ್ತಿಯೆಂದು ತಿಳಿದಿತ್ತು ಮತ್ತು ಅವನಲ್ಲಿ ಯಾವ ಪಾಲು ಬೇಡವಾಗಿತ್ತು. ಇಂದು ಮೋಸಕರವಾದ ವ್ಯಕ್ತಿಯು ಅದೇ ರೀತಿಯ ಪ್ರತಿಕ್ರಿಯೆಯನ್ನು ಪಡೆಯುತ್ತಾನೆ - ಅವನ ಸುತ್ತಲೂ ಯಾರಿಗೂ ಇರಲು ಇಷ್ಟವಿಲ್ಲ, ಅವನ ಸ್ವಾರ್ಥ, ಕತ್ತಿಯಂತೆ ಹರಿತವಾದ ನಾಲಿಗೆ ಮತ್ತು ತೀವ್ರವಾದ ದ್ವೇಷವು ಅಸಹ್ಯವಾಗಿದೆ.

## ಮುಕ್ತಾಯ

ದೋಯೇಗನಿಂದ ಒಂದು ಪಾಠವನ್ನು ನಾವು ಕಲಿಯುತ್ತೇವೆ: ಸ್ವಾರ್ಥವು ನಮ್ಮ ಜೀವಿತದಲ್ಲಿ ಹಾನಿಕರವಾದ ಮಾರ್ಗವನ್ನು ಬರಮಾಡುತ್ತದೆ! ದೋಯೇಗನಲ್ಲಿ ನಾವು ಭಯಹುಟ್ಟಿಸುವ "ಕುರುಡು ಮಹತ್ವಾಕಾಂಕ್ಷೆಯನ್ನು" ನೋಡುತ್ತೇವೆ. ಈ ಲೋಕದಲ್ಲಿ ಮುಂದೆ ಸಾಗಲು ಯಾವ ಕಾರ್ಯವನ್ನೂ ಮಾಡುವದಕ್ಕೆ ಹಿಂಜರಿಯದ ಜನರಿಗೆ ಹೇಳಲಾರದ ನಾಶನ ಕಾದಿದೆ. ದೋಯೇಗನು ಉಪಯೋಗಿಸಿದಂತ "ಕುರುಡು ಮಹತ್ವಕಾಂಕ್ಷೆಯು" ಕೇವಲ ಮುಸುಕು ಹಾಕಲ್ಪಟ್ಟ ಸ್ವಾರ್ಥವಾಗಿದೆ. ದೋಯೇಗನು ಯಶಸ್ವಿಯಾದನೆಂದು ತೋರುತ್ತದೆ - ಅವನು ರಾಜನ ಒಪ್ಪಿಗೆಯನ್ನು ಪಡೆದಿದ್ದನು, ಮುಂದುವರಿದಿದ್ದನು, ಇತ್ಯಾದಿ, ಆದರೆ ಸ್ವಲ್ಪ ಸಮಯದವರೆಗೆ ಮಾತ್ರ. ನಂತರ ಅವನು ನಂಬಲಾರದ ವೇದನೆ, ಕೆಟ್ಟತನ ಮತ್ತು ಆಳವಾದ ಪಾಪದ ಕೊಯ್ಲುನ್ನು ಕಂಡನು (ಕಿರ್ತನೆ 52:5). ಜೀವಿಸುವ ಎಲ್ಲರಿಗೆ ಜೀವನವು ಎರಡು ಆಯ್ಕೆಗಳನ್ನು ತೋರಿಸುತ್ತದೆ. ನಾವು ಎಲ್ಲಾ ಕ್ಷೇತ್ರಗಳಲ್ಲಿ ದೇವರೊಂದಿಗೆ ಜೀವಿಸುತ್ತಾ ಆತನ ವಾಕ್ಯಕ್ಕೆ ವಿಧೇಯರಾಗುವದು ಒಂದು. ನಾವು ಐಶ್ವರ್ಯವಂತರಾಗದೇ ಮತ್ತು ಹೆಸರುವಾಸಿಗಳಾಗದೇ ಇರಬಹುದು. ಆದರೆ ನವು ತೃಪ್ತರಾಗುತ್ತೇವೆ. ಕೀರ್ತನೆ 52 ಹೀಗೆ ಮುಕ್ತಾಯವಾಗುತ್ತದೆ:

> ಆದರೆ ನಾನು ದೇವಾಲಯದ ಸೊಗಸಾದ ಎಣ್ಣೇ ಮರದಂತಿರುವೆನು; ದೇವರ ಕೃಪೆಯನ್ನು ಯುಗಯುಗಾಂತರಗಳಲ್ಲಿಯೂ ನಂಬಿಕೊಂಡಿರುವೆನು. [ದೇವರೇ,] ನಿನ್ನ

ಉಪಕಾರಕ್ಕಾಗಿ ಯಾವಾಗಲೂ ನಿನ್ನನ್ನು ಸ್ತುತಿಸುವೆನು; ನಿನ್ನ ನಾಮವು ಸರ್ವೋತ್ತ ಮವೆಂದು ನಿನ್ನ ಭಕ್ತರ ಮುಂದೆ ಅದನ್ನೇ ನಿರೀಕ್ಷಿಸಿ ಕೊಂಡಿರುವೆನು (ಕೀರ್ತನೆ 52:8, 9).

ಅಥವಾ, ನಾವು ದೇವರಿಲ್ಲದೇ ಜೀವಿಸಬಹುದು, ಸ್ವಂತದಲ್ಲಿ ಭರವಸೆವಿಡುತ್ತಾ ಮತ್ತು ನಮ್ಮ ಮೋಸತನದ ಫಲವನ್ನು ಕೊಯುತ್ತಾ ಜೀವಿಸಬಹುದು, ಜಗತ್ತಿನುದ್ದಕ್ಕೂ ತಮ್ಮ ಮೂರ್ತಿಗಳನ್ನು ನಿಲ್ಲಿಸುತ್ತಾ, ರಾಷ್ಟ್ರಗಳನ್ನು ಸ್ಥಾಪಿಸುತ್ತಾ ಮತ್ತು ವೈರಿಗಳನ್ನು ಜಯಿಸುತ್ತಾ ಎಣಿಕೆಯಾಗದಷ್ಟು ಜನರಿದ್ದಾರೆ. ಇವರು ನಿಜವಾಗಿಯೂ ಬಲಶಾಲಿಗಳಲ್ಲ. ಅವರಿಗೆ ಸೋಲು ಕಾದಿದೆ, ಮತ್ತು ಅವರ ಇತಿಹಾಸವು ದಿಗಂತದಲ್ಲಿ ಕುಂದಿಹೋಗುತ್ತದೆ. ಆದರೆ ನೀತಿವಂತನು ಸದಾಕಾಲಕ್ಕೂ ಇರುವನು.

ಒಬ್ಬ ಲೇಖಕರು ಹೀಗೆ ನುಡಿದಿದ್ದಾರೆ, "ಮನುಷ್ಯರು ಒಳಗಾಗುವ ಎಲ್ಲ ಕೆಟ್ಟತನದಲ್ಲಿ, ಪ್ರತಿಕಾರದಿಂದ ಕೂಡಿದ್ದಾಗಿದೆ," ನಮ್ಮ ಸಮಾಜವು ಆಧಾರ ಮಾಡಿಕೊಂಡಿರುವ ಭರವಸೆ ಮತ್ತು ಭದ್ರತೆಯ ತತ್ವಗಳನ್ನು ಮೋಸವು ನಾಶ ಮಾಡುವದರಿಂದ, ಇತರ ಯಾವ ಅಪರಾಧವೂ ಅದಕ್ಕೆ ಸರಿಸಮಾನವಾಗಿಲ್ಲ. ಕ್ರೈಸ್ತತ್ವವು ಗಾಯಗಳನ್ನು ಕ್ಷಮಿಸುವಂತೆ ಬೋಧಿಸುತ್ತದೆ. ಆದರೆ ಮಿತೃತ್ವದ ಮತ್ತು ದಯೆಯ ವೇಷದಲ್ಲಿರುವಾಗ ಅದನ್ನು ಹಗೆ ಮಾಡುವಂತೆ ತಿಳಿಸುತ್ತದೆ. ಅದು ಅವನತಿ ಹೊಂದುವಾಗ ಸಾಧಾರಣ ಮಾನವ ಜಾತಿ ಮತ್ತು ನ್ಯಾಯವೂ ನಾಚಿಕೊಳ್ಳಬೇಕು ಎಂದು ವಾದಿಸುತ್ತದೆ! ಇಂದಿನ "ನಾಯಿಯನ್ನು ತಿನ್ನುವ" ಸಮಾಜದಲ್ಲಿ ಮತ್ತು "ಕುತ್ತಿಗೆ ಕೊಯ್ಯುವ" ವ್ಯಾಪಾರದ ತತ್ವಗಳಲ್ಲಿ, ಸರ್ವ ಕ್ರೈಸ್ತರು ದೋಯೇಗನ್ನು ನೆನಪುಮಾಡಿಕೊಳ್ಳಬೇಕು, ಮತ್ತು ಎಂದಿಗೂ ಮುಂದೆ ಮುಂದೆ ಸಾಗುವಂತೆ ಮೋಸವನ್ನು ಉಪಯೋಗಿಸಬಾರದೆಂದು ಪ್ರತಿಜ್ಞೆ ಮಾಡಬೇಕು. ಅಂತ್ಯದಲ್ಲಿ ಹೊಂದಿಕೊಂಡಿರಬೇಕಾದ ಕ್ರಯ ವಿಶ್ವಾಸಘಾತಕತವಾಗಿರಬಾರದು!